**ಕರ್ನಾಟಕ ಸರ್ಕಾರ**

ಸಂಖ್ಯೆ:ಕಾಶಿಇ/ಉಗ್ರಾಣ/05/ಕಾರಿ/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:28-02-2017.

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ: ಕಾಶಿಇ/ಉಗ್ರಾಣ/05/ಕಾರಿ/2016-17/ಬೆಂ., ದಿ:28-02-2017**

**ವಿಷಯ:** ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಗೆ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್ ಮಾಡಿ ಸರಬರಾಜು ಮಾಡುವ ಸಂಬಂಧ ಆಸಕ್ತ ಸಂಸ್ಥೆಗಳಿಂದ ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ವಿವಿಧ ವಿಭಾಗಗಳ ಮನವಿಗಳು
2) ಈ ಕಛೇರಿಯ ಟೆಂಡರ್ ಪ್ರಕಟಣೆಯ ದಿನಾಂಕ:30-01-2017

*********

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಗೆ ಕೆಳಕಂಡ ಮಾದರಿಯ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳನ್ನು ರೀಫಿಲ್/ ರೀಕಂಡಿಷನ್ ಮಾಡಿ ಸರಬರಾಜು ಮಾಡುವ ಸಂಬಂಧ ಆಸಕ್ತ ಅಂಗೀಕೃತ ಸಂಸ್ಥೆಗಳಿಂದ ಸ್ಪರ್ಧಾತ್ಮಕ ಟೆಂಡರ್‌ಗಳನ್ನು ಉಲ್ಲೇಖ(2)ರಂತೆ ಆಹ್ವಾನಿಸಲಾಗಿತ್ತು. ಆದರೆ, ಯಾವುದೇ ಟೆಂಡರ್‌ಗಳು ಸಲ್ಲಿಕೆಯಾಗದ ಕಾರಣ ಮರು ಟೆಂಡರ್‌ನ್ನು ಈ ಕೆಳಗಿನ ಷೆಡ್ಯೂಲ್‌ಗಳಂತೆ ಮತ್ತೊಮ್ಮೆ ಆಹ್ವಾನಿಸಲಾಗಿದ್ದು, ಆಸಕ್ತ ಸಂಸ್ಥೆಗಳವರು ಕೆಳಕಂಡ ನಿಬಂಧನೆಗಳಿಗೊಳಪಟ್ಟು ಮುಚ್ಚಿದ ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಈ ವಿಳಾಸಕ್ಕೆ ಖುದ್ದಾಗಿ ತಲುಪಿಸಲು ಕೋರಲಾಗಿದೆ.

| ಕ್ರ.ಸಂ. | ಸರಬರಾಜು ವಿವರ | ಪರಿಮಾಣ | ಟೆಂಡರ್ ಮೊತ್ತ ರೂ. ಗಳಲ್ಲಿ (ಅಂದಾಜು) | ಮುಂಗಡ ಠೇವಣಿ ರೂ. ಗಳಲ್ಲಿ | ಟೆಂಡರ್ ಫಾರಂ ಬೆಲೆ ರೂ. ಗಳಲ್ಲಿ |
|---|---|---|---|---|---|
| 1. | SAMSUNG/HP ಕಂಪನಿಯ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್ | 115 | 95,000 (including vat) | 2,000 | 100 |

| ಕ್ರ.ಸಂ. | ಟೆಂಡರ್ ವಿವರ | ದಿನಾಂಕ | ಸಮಯ |
|---|---|---|---|
| 1. | ಟೆಂಡರ್ ಪ್ರಕಟಣೆ ದಿನಾಂಕ | 28-02-2017 | |
| 2. | ಟೆಂಡರ್ ಫಾರಂ ವಿತರಣೆ ದಿನಾಂಕ | 28-02-2017 | |
| 3. | ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ | 09-03-2017 | 4.30 P.M |
| 4. | ಟೆಂಡರ್ ತೆರೆಯುವ ದಿನಾಂಕ | 09-03-2017 | 5.00 P.M |

**ನಿಬಂಧನೆಗಳು :**

1. ಟೆಂಡರ್ ಹಾಕಲು ಇಚ್ಚೆಯುಳ್ಳವರು ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿನಲ್ಲಿ ಅರ್ಜಿ ಶುಲ್ಕದ ಬಾಬ್ತು ರೂ.100-00(ಒಂದುನೂರು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಿ, ದಿನಾಂಕ:09-03-2017ರೊಳಗೆ ಕಛೇರಿಯ ಕೆಲಸದ ವೇಳೆಯಲ್ಲ (ರಜಾ ದಿನಗಳನ್ನು ಹೊರತುಪಡಿಸಿ) ಟೆಂಡರ್ ಫಾರಂಗಳನ್ನು ಪಡೆಯುವುದು.
2. ಲಕೋಟೆ ಪದ್ಧತಿ: ಕರ್ನಾಟಕ ರಾಜ್ಯ ಪಾರದರ್ಶಕ ಅಧಿನಿಯಮ 2000 ಮತ್ತು ಮುಂದುವರೆದ ಆದೇಶ 2002ರ ನಿಯಮದನ್ವಯ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಲಕೋಟೆ ಪದ್ಧತಿಯನ್ನು ಅಳವಡಿಸಿದ್ದು, ಭರ್ತಿ ಮಾಡಿದ ಟೆಂಡರ್ ಫಾರಂನ್ನು ಲಕೋಟೆಯಲ್ಲಿಟ್ಟು ಮೊಹರು ಮಾಡಿ, ಖುದ್ದಾಗಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಾರ್ಯಾಲಯದಲ್ಲಿ ಇರಿಸಲಾಗಿರುವ ಟೆಂಡರ್ ಬಾಕ್ಸ್‌ನಲ್ಲಿ ದಿನಾಂಕ: 09-03-2017ರ ಸಂಜೆ 4.30 ಗಂಟೆ ಒಳಗಾಗಿ ಹಾಕುವುದು.

3. ಇ.ಎಂ.ಡಿ. ಮೊತ್ತ ರೂ.2,000/-ಗಳನ್ನು ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿಗೆ ಸಂದಾಯವಾಗುವಂತೆ ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ.ಯನ್ನು ಸಲ್ಲಿಸುವುದು.
4. ಸಿ.ಎಸ್.ಟಿ./ಕೆ.ಎಸ್.ಟಿ./ವ್ಯಾಟ್/ಪಾನ್ ಹಾಗೂ ಬ್ಯಾಂಕ್ ಅಕೌಂಟ್ ಡಿಟೇಲ್ಸ್‌ನ ಜೆರಾಕ್ಸ್ ದೃಢೀಕೃತ ಪ್ರತಿಗಳನ್ನು (ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿರಬೇಕು) ಸಲ್ಲಿಸುವುದು.
5. ಈ ಹಿಂದೆ ಸರ್ಕಾರಿ / ಸಂಸ್ಥೆಗಳಿಗೆ ಸರಬರಾಜು ಮಾಡಿದ್ದಲ್ಲಿ ಅವುಗಳ ವಿವರ ಸಲ್ಲಿಸುವುದು.
6. ದರಗಳನ್ನು ಒಂದು ಕಾಟ್ರಿಡ್ಜ್‌ಗೆ (ವ್ಯಾಟ್/ಎಲ್ಲಾ ತೆರಿಗೆಗಳು ಒಳಗೊಂಡಂತೆ) ಮಾತ್ರ ಅಂಕಿಯಲ್ಲಿ ಹಾಗೂ ಪದಗಳಲ್ಲಿ ಸ್ಪಷ್ಟವಾಗಿ ನಮೂದಿಸುವುದು.
7. ಅಧಿಕೃತ ಮಾರಾಟಗಾರರು ಮೊಹರಿನೊಂದಿಗೆ ಸಹಿಯನ್ನು ಹಾಕುವುದು.
8. ಆರು ತಿಂಗಳ ಖಾತರಿ ನೀಡಿ, ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್ ಮಾಡಿ, ಸರಬರಾಜು ಮಾಡತಕ್ಕದ್ದು ಮತ್ತು ಟೆಂಡರ್ ದರದಲ್ಲಿ ಯಾವುದೇ ಕಾರಣಕ್ಕೂ ದರವನ್ನು ಹೆಚ್ಚಿಸಬಾರದು.
9. ಟೆಂಡರ್‌ದಾರರು ತಾವೇ ಸ್ವತಃ ಅಥವಾ ತಮ್ಮಿಂದ ಲಿಖಿತವಾಗಿ ಸೂಚಿಸಿದ ವ್ಯಕ್ತಿ ಮಾತ್ರ ಟೆಂಡರ್ ತೆರೆಯುವಾಗ ಹಾಜರಿರತಕ್ಕದ್ದು.
10. ಅಪೂರ್ಣವಾದ / ನಿಗಧಿತ ಅವಧಿಯೊಳಗೆ ಸಲ್ಲಿಸದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
11. ನಿಯಮಾನುಸಾರ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್‌ಗಳಿಗೆ ಕಡಿಮೆ ದರ ಸೂಚಿಸಿದ/ ಗುಣಮಟ್ಟ ಹೊಂದಿರುವ ಟೆಂಡರ್‌ದಾರರ ಇ.ಎಂ.ಡಿ. ಮೊತ್ತವನ್ನು ಹೊರತುಪಡಿಸಿ, ಉಳಿದ ಟೆಂಡರ್‌ದಾರರ ಇ.ಎಂ.ಡಿ. ಮೊತ್ತವನ್ನು ಒಂದು ತಿಂಗಳ ಒಳಗಾಗಿ ಹಿಂದಿರುಗಿಸಲಾಗುವುದು.
12. ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್‌ಗಳನ್ನು ಸುಸ್ಥಿತಿಯಲ್ಲಿ ಉತ್ತಮ ಗುಣಮಟ್ಟ ಮತ್ತು ಪರಿಮಾಣದೊಂದಿಗೆ ಸರಬರಾಜು ಮಾಡಲು ನೀಡುವ ಆದೇಶದಲ್ಲಿ ಸೂಚಿಸಿದ ಅವಧಿಯೊಳಗೆ ಸ್ವಂತ ಸಾಗಾಣಿಕೆ ವೆಚ್ಚದಲ್ಲಿ ಕಛೇರಿ ಸರಬರಾಜು ಮಾಡತಕ್ಕದ್ದು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
13. ಸೂಚಿಸಿದ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್‌ಗಳನ್ನು ಹೊರತುಪಡಿಸಿ ಬೇರೆ ಅಥವಾ ಬದಲೀ ಕಳಪೆ ಗುಣಮಟ್ಟದ ಲೇಸರ್ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ರೀಫಿಲ್/ ರೀಕಂಡಿಷನ್‌ಗಳನ್ನು ಸರಬರಾಜು ಮಾಡಿದ್ದಲ್ಲಿ ಅಥವಾ ಸರಬರಾಜು ಮಾಡಲು ವಿಫಲರಾದಲ್ಲಿ ಅಂತಹವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ಟೆಂಡರ್ ಫಾರಂನಲ್ಲಿ ಯಾವುದೇ ತಿದ್ದುಪಡಿ ಇದ್ದ ಸ್ಥಳದಲ್ಲಿ ಸಹಿ ಮಾಡಿರತಕ್ಕದ್ದು.
15. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.
16. ಯಾವುದೇ ಕಾರಣ ನೀಡದೇ ಟೆಂಡರ್ ಒಪ್ಪುವ/ ತಿರಸ್ಕರಿಸುವ/ ಮುಂದೂಡುವ ಅಧಿಕಾರವನ್ನು ಪ್ರಾಧಿಕಾರ ಕಾಯ್ದಿರಿಸಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ,**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು- ತಮ್ಮ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಕೋರಿದೆ.
2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು, ತಮ್ಮ ಮುಂದಿನ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಕೋರಿದೆ.
3. ನಿರ್ದೇಶಕರು, ಕರ್ನಾಟಕ ವಾರ್ತೆ ಮತ್ತು ಪ್ರಸಾರ ಇಲಾಖೆ, ಇನ್‌ಫೆಂಟ್ರಿರಸ್ತೆ, ಬೆಂಗಳೂರು- ಮೇಲ್ಕಂಡ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವಂತೆ ಕೋರಿದೆ.
4. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
5. ಸಂಬಂಧಿಸಿದ ಆಸಕ್ತ ಸರಬರಾಜುದಾರರಿಗೆ / ಕಛೇರಿ ಸೂಚನಾ ಫಲಕಕ್ಕೆ
6. ಹೆಚ್ಚಿನ ಮತ್ತು ಕಛೇರಿ ಪ್ರತಿ